**ದಿನಾಂಕ: 20.08.2022 ರಂದು ವಾರ್ಡ್ ಸಂಖ್ಯೆ: 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ವಾರ್ಡ್ ಕಮಿಟಿ ಸಭೆಗೆ ಹಾಜರಿದ್ದ ಅಧಿಕಾರಿಗಳು**

| ಕ್ರ.ಸಂ | ಹೆಸರು | ಪದನಾಮ/ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ ಡಿ.ಸುಂದರಯ್ಯ | ನೋಡಲ್ ಅಧಿಕಾರಿಗಳು | ಹಾಜರು |
| 2. | ಶ್ರೀ. ಕೆ.ವಿ. ವೆಂಕಟರಮಣ | ಸಹಾಯಕ ಅಭಿಯಂತರರು ವಾರ್ಡ್ ನಂ.184 | ಹಾಜರು |
| 3. | ಶ್ರೀ ಶೇಖರ್ ಎಂ | ಜೂನಿಯರ್ ಇಂಜಿನಿಯರ್, ಬಿಡಬ್ಲ್ಯೂಎಸ್‌ಎಸ್‌ಬಿ | ಹಾಜರು |
| 4. | ಶ್ರೀ ನರಸಪ್ಪ | ತೋಟಗಾರಿಕಾ ಸಹಾಯಕರು, ಬೊಮ್ಮನಹಳ್ಳಿ ವಲಯ | ಹಾಜರು |
| 5. | ಶ್ರೀ ಮೋಸಿಸ್ ಎ, | ಮೇಲ್ವಿಚಾರಕರು, ಘನ ತ್ಯಾಜ್ಯ ನಿರ್ವಹಣೆ | ಹಾಜರು |
| 6. | ಶ್ರೀ ಹರೀಶ್ | ವಲಯ ಅರಣ್ಯಾಧಿಕಾರಿಗಳು, ಅರಣ್ಯ ಸಂರಕ್ಷಕ ಇಲಾಖೆ, ಬೊಮ್ಮನಹಳ್ಳಿ ವಲಯ | ಹಾಜರು |
| 7. | ಶ್ರೀ ವೆಂಕಟೇಶ್.ಕೆ | ಘನತ್ಯಾಜ್ಯ ನಿರ್ವಹಣೆ ಇಲಾಖೆ, ಬಿಬಿಎಂಪಿ | ಹಾಜರು |
| 8. | ಶ್ರೀ ರವೀಂದ್ರ | ಮೇಲ್ವಿಚಾರಕರು, ಘನ ತ್ಯಾಜ್ಯ ನಿರ್ವಹಣೆ | ಹಾಜರು |
| 9. | ಶ್ರೀಮತಿ ನಿರ್ಮಲಾ ವೈ.ಎನ್ | ಸಹಾಯಕ ಅಭಿಯಂತರರು ,ಬಿ.ಡಬ್ಲ್ಯೂ.ಎಸ್.ಎಸ್.ಬಿ, 110 ಹಳ್ಳಿ ಯೋಜನೆ | ಹಾಜರು |
| 10 | ಶ್ರೀ ಶಶಿಕುಮಾರ್.ಹೆಚ್.ಎ | ಹಿರಿಯ ಆರೋಗ್ಯ ಪರಿವೀಕ್ಷಕರು, ಉತ್ತರಹಳ್ಳಿ | ಹಾಜರು |
| 11. | ಡಾ.ಸುಧಾ.ಬಿ.ಕೆ | ಆರೋಗ್ಯ ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ, ಉತ್ತರಹಳ್ಳಿ | ಹಾಜರು |
| 12. | ಶ್ರೀ ಮುನಿರಾಜು | ಬೀದಿ ದೀಪ ನಿರ್ವಹಣೆ | ಹಾಜರು |
| 13 | ಶ್ರೀ ವರುಣ್ ಎಂ.ಎಸ್ | 110 ಹಳ್ಳಿ ಯೋಜನೆ | ಹಾಜರು |
| 14. | ಶ್ರೀಮತಿ ಚೇತನಾ ನಾಯಕ್ | ಸಬ್ ಇನ್ಸ್‌ಪೆಕ್ಟರ್ ,ಸಂಚಾರಿ ಪೋಲೀಸ್ ಠಾಣೆ, ಕುಮಾರಸ್ವಾಮಿ ಬಡಾವಣೆ | ಹಾಜರು |
| 15. | ಶ್ರೀ ಶಂಕರ್.ಜಿ | ಜೂನಿಯರ್ ಇಂಜಿನಿಯರ್, ಬೆಸ್ಕಾಂ | ಹಾಜರು |

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಸಮಿತಿ ಸದಸ್ಯರು**

1. ಶ್ರೀ. ಎಸ್.ಕೆ.ಸುಧೀಂದ್ರ- ಪೂರ್ಣಪ್ರಜ್ಞಾ ಬಡಾವಣೆಯ RWA
2. ಶ್ರೀ ಶ್ರೀನಾಥ್- ಪೂರ್ಣಪ್ರಜ್ಞಾ ಬಡಾವಣೆಯ RWA
3. ಶ್ರೀ ಅಮರ್.ಎಂ.ಆರ್- ಎ.ಜಿ.ಎಸ್ ಬಡಾವಣೆ RWA
4. ಶ್ರೀ ಅರುಣ್ - ಎ.ಜಿ.ಎಸ್ ಬಡಾವಣೆ RWA

ಮು.ತಿ.ನೋ

Scanned with CamScanner

ಮೇಲೆ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀ ಡಿ.ಸುಂದರಯ್ಯರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಪರಿಚಯದೊಂದಿಗೆ ವಿವರಿಸುತ್ತಾ ಸದರಿ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳು/ ಸಂಬಂಧಪಟ್ಟ ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

**1. ಸಂಚಾರಿ ಪೋಲೀಸ್ ಇಲಾಖೆಗೆ ಸಂಬಂಧಿಸಿದಂತೆ**

➢ ಪೂರ್ಣಪ್ರಜ್ಞಾ ಬಡಾವಣೆಯಲ್ಲಿರುವ ಪಾರ್ಕ್ ನಂ.5 ರ ರಸ್ತೆ ನಂ.6 ಮತ್ತು 7ನೇ ಮುಖ್ಯರಸ್ತೆಯಲ್ಲಿ ಟ್ರಾಫಿಕ್ ಪೋಲೀಸ್ ಪ್ಯಾಟ್ರೋಲಿಂಗ್ ಮಾಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆ ರವರಿಗೆ ಸೂಚಿಸಿರುತ್ತಾರೆ

**2. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ**

➢ ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ಡ್ರೈನ್ ನಲ್ಲಿ ಮರಗಳು ಬೆಳೆದಿದ್ದು, ತೆರವುಗೊಳಿಸಿ ಮಳೆ ನೀರು ಸರಾಗವಾಗಿ ಹರಿಯಲು ಮಾರ್ಗ ಮಾಡಿಕೊಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಅರಣ್ಯ_ಇಲಾಖೆ ರವರಿಗೆ ಸೂಚಿಸಿರುತ್ತಾರೆ.

**3. ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂದಿಸಿದಂತೆ**

➢ ಎಜಿಎಸ್ ಬಡಾವಣೆಯಲ್ಲಿ 3ನೇ ಮುಖ್ಯರಸ್ತೆಯಲ್ಲಿ ಬೂಸ್ಟರ್ ಪಂಪ್ ಅಳವಡಿಸಲು ಅಗೆದಿರುವ ಉಳಿಕೆ ಮಣ್ಣು ರಸ್ತೆಯಲ್ಲೇ ಇದ್ದು ತೆರವುಗೊಳಿಸಲು ಕೋರಿರುತ್ತಾರೆ.

➢ ಎಜಿಎಸ್ ಬಡಾವಣೆಯ ತಾಜಾ ಬೇಕರಿ ಮುಖ್ಯರಸ್ತೆಯಲ್ಲಿ ಬೂಸ್ಟರ್ ಪಂಪ್ ಅಳವಡಿಸಲು ರಸ್ತೆಯನ್ನು ಅಗೆದಿದ್ದು, ಪುನಃ ರಸ್ತೆಯನ್ನು ಯಥಾಸ್ಥಿತಿಗೆ ತರಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು 110 ಹಳ್ಳಿ ಯೋಜನೆ ಇಲಾಖೆ ರವರಿಗೆ ಸೂಚಿಸಿರುತ್ತಾರೆ.



Scanned with CamScanner

**4. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ**

- ವಾರ್ಡ್ ವ್ಯಾಪ್ತಿಯಲ್ಲಿರುವ ಪಾರ್ಕ್‌ಗಳಲ್ಲಿ ಸ್ವಚ್ಛಗೊಳಿಸಿರುವ ತ್ಯಾಜ್ಯವನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ ಪಾರ್ಕ್‌ಗಳಲ್ಲಿ ನೀರಿನ ಸಮಸ್ಯೆಯಿದ್ದು ಈ ಕೂಡಲೇ ಬಗೆಹರಿಸಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ತೋಟಗಾರಿಕೆ ಇಲಾಖೆ_ರವರಿಗೆ ಸೂಚಿಸಿರುತ್ತಾರೆ.

**5. ಬೃಹತ್ ನೀರುಗಾಲುವೆ ಇಲಾಖೆಗೆ ಸಂಬಂಧಪಟ್ಟಂತೆ.**

- ಎ.ಜಿ.ಎಸ್ ಬಡಾವಣೆಯಲ್ಲಿರುವ ಚರ್ಚಿನ ಎದುರು ರಸ್ತೆಯಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ಹೂಳು ತುಂಬಿಕೊಂಡಿದ್ದು ಈ ಕೂಡಲೇ ತೆರವುಗೊಳಿಸಿ ಸುರಕ್ಷತಾ ದೃಷ್ಟಿಯಿಂದ ಕಾಲುವೆ ಸ್ಲಾಬ್ ಗಳನ್ನು ಅಳವಡಿಸಲು ಕೋರಿರುತ್ತಾರೆ.
- RWA ಸದಸ್ಯರು ಎಲ್.ಇ.ಡಿ ದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ವಲಯ ಸಂಬಂಧಪಟ್ಟ ಬೃಹತ್ ನೀರುಗಾಲುವೆ ಇಲಾಖೆ_ರವರಿಗೆ ಸೂಚಿಸಿರುತ್ತಾರೆ

ಶ್ರೀ ಡಿ.ಸುಂದರಯ್ಯ
ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ
ಆಂಜನಾಪುರ ಉಪವಿಭಾಗ

ಶ್ರೀ ವೆಂಕಟರಮಣ.ಕೆ.ವಿ
ಸಂಚಾಲಕರು ಹಾಗೂ ಸ.ಅ-184

Scanned with CamScanner